


## ನಕ್ಕುಬಿಡಿ

ವೈದ್ಯ: ನಿಮ್ಮ ಹೃದಯದ ಬಡಿತ ಅಷ್ಟು ಜೋರಾಗಿ ಢವಢವಾಂತ ಬಡಿದು ಕೊಳ್ಳಲು ಕಾರಣವೇನು?

ರೋಗಿ: ಬೋರ್ಡಿನ ಮೇಲೆ ನೀವು ಬರೆಸಿರುವ ಕನ್ಸಲ್ಟೆನ್ಸಿ ಫೀಸ್ ನೋಡಿದೆ.

★★★

ಗುಂಡ: ಕಂಪ್ಯೂಟರ್‌ಗೆ ಹಾಕುವ ಕರ್ಟನ್ ಕೊಡಿ.

ಅಂಗಡಿಯಾತ: ಕಂಪ್ಯೂಟರ್‌ಗೆ ಕರ್ಟನ್ ಎಲ್ಲಿರುತ್ತೆ ಸಾರ್?

ಗುಂಡ: ಯಾಕಿರಲ್ಲ? ವಿಂಡೋ ಇದ್ದ ಮೇಲೆ ಕರ್ಟನ್ ಇರಲೇಬೇಕಲ್ವ?

★★★

ಕವಿ: ಲೇ ಇಂದು ನೀನು ಮಾಡಿದ ಕಾಫಿ ತುಂಬಾ ರುಚಿಯಾಗಿದೆ.

ಹೆಂಡತಿ: ಎಲ್ಲಾ ನಿಮ್ಮ ಹಸ್ತಪ್ರತಿಯ ಪ್ರಭಾವ.

ಕವಿ: ಅರೆ ಹೌದಾ? ನೀನು ಅದನ್ನು ಓದಿ ಕಾಫಿ ಮಾಡಿದೆ ಅನ್ನು.

ಹೆಂಡತಿ: ಇಲ್ಲಾರೀ! ಗ್ಯಾಸ್ ಮುಗಿದಿತ್ತು, ನಿಮ್ಮ ಹಸ್ತಪ್ರತಿಯನ್ನು ಒಲೆಗೆ ಹಾಕಿ ಕಾಫಿ ಮಾಡಿದೆ.

★★★

ನರ್ಸ್: ಡಾಕ್ಟರ್ ಯಾರೋ ಒಬ್ಬಾತ ಬಂದು ನಮ್ಮ ಆಸ್ಪತ್ರೆಯಿಂದ ಒಬ್ಬ ಹುಚ್ಚ ತಪ್ಪಿಸಿಕೊಂಡಿದ್ದಾನಾಂತ ಕೇಳ್ತಾ ಇದಾನೆ.

ವೈದ್ಯ: ಯಾಕಂತೆ?

ನರ್ಸ್: ಯಾರೋ ಒಬ್ಬ ಅವನ ಹೆಂಡತಿಯ ಜೊತೆ ಓಡಿ ಹೋಗಿದ್ದಾನಂತೆ!

★★★

ಗೆಳೆಯ: ಆತ್ಮಹತ್ಯೆ ಮಾಡಿಕೊಳ್ಳಲು ಹೊರಟ ಆ ಜಿಪುಣನ ಮನಸ್ಸನ್ನು ಪರಿವರ್ತನೆ ಮಾಡಿದರೂ ಅವನು ಯಾಕೆ ಆತ್ಮಹತ್ಯೆ ಮಾಡಿಕೊಂಡ?

ಗುಂಡ: ಹಣ ಕೊಟ್ಟು ತಂದ ವಿಷ ವೇಸ್ಟ್ ಆಗುತ್ತದಲ್ಲಾಂತ!

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

ಹೆಂಡ್ತಿ: ರ್‍ರೀ... ಮೂಢನಂಬಿಕೆ ಎಂದರೇನು?

ಗಂಡ: ನನ್ನ ಮಾತನ್ನು ನೀನು ಎಂದಿಗೂ ಕೇಳುವುದಿಲ್ಲ ಎಂದು ತಿಳಿದಿದ್ದರೂ, ಒಂದಲ್ಲ ಒಂದು ದಿನ ಕೇಳಿಯಾಳು ಎಂಬ ನಂಬಿಕೆಯಿಂದ ಸಂಸಾರ ಮಾಡುತ್ತಿದ್ದೀನಲ್ಲ! ಇದು ನನ್ನ ಮೂಢ ನಂಬಿಕೆಯಲ್ಲದೆ ಇನ್ನೇನು?

★★★

ರಮೇಶ: ಅಸಲು ದೆವ್ವಗಳೇ ಇಲ್ಲ ಅನ್ನೋದು ನನ್ನ ನಂಬಿಕೆ... ನೀನು ಏನಂತೀಯಾ?!

ಉಮೇಶ: ಮದುವೆಗೆ ಮೊದಲು ನನ್ನದೂ ನಿನ್ನ ಅಭಿಪ್ರಾಯವೇ ಆಗಿತ್ತು.

★★★

ರಿಸಲ್ಟ್ ಹೆಂಗೇ ಇರಲಿ.. ನಮ್ಮ ದೇಶದ ಮಕ್ಕಳು ಸದಾ ಕೂಲ್!

ಹುಡುಗರಿಗೆ: ಪಾಸಾದ್ರೆ ಅಪ್ಪ ಕಾರ್ ಕೀ ಕೊಡ್ತಾರೆ.

ಫೇಲಾದ್ರೆ ಟ್ರ್ಯಾಕ್ಟರ್ ಕೀ ಕೊಡ್ತಾರೆ.

ಹುಡುಗಿಯರಿಗೆ: ಪಾಸಾದ್ರೆ ಅಮ್ಮ ಜಾಮೂನು ಮಾಡಿ ಕೊಡ್ತಾಳೆ.

ಫೇಲಾದ್ರೆ ಜಾಮೂನು ಮಾಡೋದು ಹೇಗೆ ಅಂತ ಹೇಳಿಕೊಡ್ತಾಳೆ!

**(ಸಂಗ್ರಹ) ಬಿ.ಹನುಮಂತ ಭಟ್**



ತಾಯ್ತನದ ನಂತರ ದೇಹ ಸೌಂದರ್ಯದ ಆರೈಕೆ
ಮಮ್ಮಿ ಮೇಕ್‌ಓವರ್



ಮಹಿಳೆಯರಿಗೆ ಗರ್ಭಧಾರಣೆಯ ಸಮಯದಲ್ಲಿ ಹಾರ್ಮೋನ್‌ಗಳಲ್ಲಿ ವ್ಯತ್ಯಾಸವಾಗುವುದರಿಂದ ಹಾಗು ಹೆರಿಗೆ ನಂತರ ಅವರು ತೋರುವ ಅಸಮರ್ಪಕ ದೇಹದ ಬಾಹ್ಯ ರೂಪದಲ್ಲಿ ಬದಲಾವಣೆಗಳು ಕಂಡು ಬರುತ್ತದೆ. ಇವುಗಳಲ್ಲಿ ಮುಖ್ಯವಾದವು ಯಾವುದೆಂದರೆ, ಸ್ತನಗಳು ಜೋತು ಬೀಳುವುದರ ಜೊತೆಗೆ ಗಾತ್ರ ಕಡಿಮೆ ಅಥವಾ ಹೆಚ್ಚಬಹುದು. ಹೊಟ್ಟೆಯ ಸ್ನಾಯುಗಳ ದೌರ್ಬಲ್ಯ ಹಾಗು ಹೊಟ್ಟೆಯ ಸುತ್ತಮುತ್ತಲಿನ ಭಾಗಗಳಲ್ಲಿ ಕೊಬ್ಬು ಶೇಖರಣೆಯಾಗುವುದರಿಂದ ಹೊಟ್ಟೆಯು ಉಬ್ಬಿನಂತಾಗುವುದು ಹಾಗು ಹೆಚ್ಚಿನ ಭಾರದಿಂದ ಜೋತು ಬೀಳುವುದು. ದೇಹದ ಇನ್ನಿತರೆ ಭಾಗಗಳಲ್ಲಿ ಸಹ ಹೆಚ್ಚಿನ ಕೊಬ್ಬು ಶೇಖರಣೆ ಆಗುವುದು. ಮಹಿಳೆಯರ ಜನನೇಂದ್ರಿಯಗಳಲ್ಲಿ ಬದಲಾವಣೆಯಾಗುವುದರಿಂದ ಲೈಂಗಿಕ ಅನ್ಯೋನ್ಯತೆ ಕಳೆದುಕೊಳ್ಳುವ ಸಾಧ್ಯತೆಯಿದೆ.

Breast Surgeries - (Breast Augmentation) - ಸಿಲಿಕಾನ್ ಇಂಪ್ಲಾಂಟ್ (Silicon Implants) ಅಥವಾ ಕಸಿ (Fat Grafting) ಮೂಲಕ ಸ್ತನಗಳ ಗಾತ್ರ ಹಾಗು ಆಕಾರವನ್ನು ವೃದ್ಧಿಸಬಹುದು. ಭಾರವಾದ ಸ್ತನಗಳ ಗಾತ್ರ ಕಡಿಮೆ ಮಾಡುವುದರಿಂದ (Breast Reduction) ದೈಹಿಕ ಹಾಗು ಮಾನಸಿಕ ಕಿರಿಕಿರಿಯನ್ನು ತಪ್ಪಿಸಬಹುದು. ಜೋತು ಬಿದ್ದ ಸ್ತನಗಳಿಗೆ Mastopexy (Breast Lift) ಸರ್ಜರಿಯಿಂದ ಪರಿಹಾರ ಕಂಡುಕೊಳ್ಳಬಹುದು.

Abdominoplasty / Tummy Tuck - Liposuction ಮೂಲಕ ಹೊಟ್ಟೆಯ ಭಾಗದ ಹೆಚ್ಚಿನ ಕೊಬ್ಬಿನಾಂಶವನ್ನು ತೆಗೆದು ಆ ಭಾಗದ ಮಾಂಸಖಂಡಗಳನ್ನು ಬಿಗಿಯಾಗಿಸಲಾಗುವುದು. ಸಡಿಲವಾದ / ಹೆಚ್ಚಾದ ಚರ್ಮವನ್ನು ತೆಗೆದು ಹೊಸ ಹೊಕ್ಕಳನ್ನು ಮಾಡಿಕೊಡಲಾಗುತ್ತದೆ. ಸರ್ಜರಿಯ ಕಲೆಯನ್ನು ಒಳ ಉಡುಪಿನ ಪ್ರದೇಶದಲ್ಲಿ ಮಾಡುವ ಮೂಲಕ ಕಾಣದಂತೆ ಮಾಡಲಾಗುತ್ತದೆ. ಹಾಗಾಗಿ ಬಿಗಿಯುಡುಪು ಅಥವಾ ಜೀನ್ಸ್ ಧರಿಸಲು ಅನುಕೂಲವಾಗುತ್ತದೆ.

ಇನ್ನಿತರೆ ಸೇವೆಗಳು : ಬೊಜ್ಜುತನಕ್ಕೆ ಸರ್ಜರಿ, ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಮೂಗಿನ ವಿಕಾರತೆ ಸರಿಪಡಿಸುವುದು, ಕೆನ್ನೆಗುಳಿ, ಮುಖದ ಕಾಸ್ಮೆಟಿಕ್ ಸರ್ಜರಿಗಳು, ಇತ್ಯಾದಿ...

**ಡಾ : ಗಿರೀಶ್ ಎ. ಸಿ., ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್, ಕರ್ಲ್ಸ್ ಮತ್ತು ಕರ್ವ್ಸ್ ಹೇರ್ ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ರಾಜಾಜಿನಗರ, ಬೆಂಗಳೂರು.**

**8088400400 9448571216**

www.curlsncurves.com

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು